

# ವಾಟರ್ ಮೀಲ್!



ಪ್ರಪಂಚದಲ್ಲೇ ಅತ್ಯಂತ ಪುಟ್ಟ ಹೂವಿನ ಗಿಡ ವಾಟರ್ ಮೀಲ್. ಲ್ಯಾಮ್ನೇಸಿಯಾ ಕುಟುಂಬಕ್ಕೆ ಸೇರಿದ ಈ ಗಿಡದ ವೈಜ್ಞಾನಿಕ ಹೆಸರು ವೂಲ್ಫಿಯಾ ಗ್ಲಾಬೊಸಾ. ಗಾತ್ರದಲ್ಲಿ ತುಂಬಾ ಚಿಕ್ಕದಾಗಿರುವುದರಿಂದ ಇದನ್ನು ಬರಿಗಣ್ಣಿನಿಂದ ನೋಡುವುದು ತುಸು ಕಷ್ಟವೇ. ಇದು ಎಷ್ಟು ಚಿಕ್ಕದೆಂದರೆ ಗುಂಡು ಸೂಜಿಯ ತಲೆಯ ಮೇಲೆ ಸುಮಾರು ಒಂದು ಡಜನ್ ಸಸ್ಯಗಳನ್ನು ಸುಲಭವಾಗಿ ಕೂರಿಸಬಹುದು.

ನೀವೇನಾದರೂ ಬೆರಳ ತುದಿಯಲ್ಲಿ ಈ ಗಿಡಗಳನ್ನು ಹಿಡಿಯಬೇಕೆಂದರೆ ನಿಮಗೆ 5000 ದಷ್ಟು ಸಸ್ಯ ಬೇಕಾಗುತ್ತದೆ. ಈ ಗಿಡಗಳು ಸಿಹಿ ನೀರಿನ ಕೊಳಗಳಲ್ಲಿ, ತೊರೆಗಳಲ್ಲಿ, ಜೌಗು ಪ್ರದೇಶದಲ್ಲಿ ಗುಂಪು ಗುಂಪಾಗಿ ಕಂಡುಬರುತ್ತವೆ. ಹಸಿರು ಅಥವಾ ಹಳದಿ ಬಣ್ಣವನ್ನು ಹೊಂದಿರುವ ಈ ಪುಟ್ಟ ಗಿಡಕ್ಕೆ ಬೇರುಗಳು ಇರುವುದಿಲ್ಲ, ಅದಕ್ಕಾಗಿಯೇ ಇವು ನೀರಿನಲ್ಲಿ ತೇಲುತ್ತಿರುತ್ತವೆ. ಈ ಗಿಡವು ಅಪರೂಪವಾಗಿ ಹೂಗಳನ್ನು ಬಿಡುತ್ತವೆ. ಈ ಮಿನಿ ಸೈಜಿನ ವಾಟರ್ ಮೀಲ್‌ನಲ್ಲಿ ಬಿಡುವ ಮಿನಿ ಸೈಜ್ ಫ್ರೂಟ್ ಯುಟ್ರಿಕಲ್. ಇದು ಪ್ರಪಂಚದಲ್ಲೇ ಅತೀ ಚಿಕ್ಕದಾದ ಹಣ್ಣು. ವೂಲ್ಫಿಯಾ ವರ್ಗಕ್ಕೆ ಸೇರಿರುವ ಗಿಡಗಳು ಸೋಯಾಬೀನ್‌ನಂತೆಯೇ ಪ್ರೊಟೀನ್ ಹೊಂದಿರುತ್ತವೆ. ಅಂದರೆ ಸುಮಾರು ಶೇ.40 ಪ್ರೊಟೀನ್ ಇರುತ್ತದೆ. ಅದಕ್ಕಾಗಿ ಏಷ್ಯಾ ಮತ್ತು ಇತರ ಭಾಗಗಳಲ್ಲಿದ್ದ ಹಿಂದಿನ ಕಾಲದ ಜನರು ನೀರಿನಿಂದ ಇವುಗಳನ್ನು ಸಂಗ್ರಹಿಸಿ ತರಕಾರಿಯಂತೆ ಉಪಯೋಗಿಸುತ್ತಿದ್ದರಂತೆ.

■ ವಿದ್ಯಾ, ಹಾಲಭಾವಿ